## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

**ವಿಶೇಷ/ಸತ್ರ ಮೊಕದ್ದಮೆ ಸಂಖ್ಯೆ:- 816/2021**

ಪ್ರಾಸಾಃ- 12 ಚಾಸಾಃ- 13

| | | |
|---|---|---|
| ಸಾಕ್ಷಿಯ ಹೆಸರು | : | ಮಲ್ಲಿಕಾರ್ಜುನ |
| ತಂದೆ/ಗಂಡನ ಹೆಸರು | : | ಮರಿಯಪ್ಪ |
| ವಯಸ್ಸು | : | 41 ವರ್ಷ |
| ವೃತ್ತಿ | : | ಹೊಳಗುಂದ ಗ್ರಾಮ ಪಂಚಾಯಿತಿಯಲ್ಲಿ ಸ್ವೀಪರ್ ಕೆಲಸ |
| ವಾಸಸ್ಥಳ | : | ಹೊಳಗುಂದ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 12.12.2023

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 12 ಮತ್ತು 20 ಗೊತ್ತು . ನಾನು ಹೊಳಗುಂದ ಮಂಡಲ ಪಂಚಾಯಿತಿ ವೈಸ್ ಚೇರ್ ಮೆನ್ ಇದ್ದು ಈಗ್ಗೆ 2 ವರ್ಷಗಳ ಹಿಂದೆ ಬಳ್ಳಾರಿ ಪೋಲೀಸರು ನಮ್ಮ ಪಂಚಾಯಿತಿ ಕಚೇರಿಗೆ ಬಂದು ನಮ್ಮ ಸಹಿಗಳನ್ನು ಪಡೆದು ಕೊಂಡಿರುತ್ತಾರೆ . ನನಗೆ ಚಾಸಾ 36 ಗೊತ್ತು . ಚಾಸಾ 36 ರವರು ನಮ್ಮ ಸಮಕ್ಷಮ ಯಾವುದೇ ಪೋಟೋಗಳನ್ನು ತೋರಿಸಿರುವುದಿಲ್ಲ . ನನಗೆ ಚಾಸಾ 1 ಗೊತ್ತಿಲ್ಲ . ಪೊಲೀಸರು ನಮ್ಮ ಸಮಕ್ಷಮ ಚಾಸಾ 1 ರವರ ತಾಯಿ ಮತ್ತು ತಂಗಿಯರ ಶವಗಳು ಕಾಲುವೆಯಲ್ಲಿ ತೇಲಿ ಹೋಗುತ್ತಿದ್ದ ಬಗ್ಗೆ ಪೋಟೋ ತೆಗೆದಿದ್ದನ್ನು ನಮ್ಮ ಮುಂದೆ ಯಾರೂ ಹಾಜರು ಪಡಿಸಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿಲ್ಲ . ಸಾಕ್ಷಿಗೆ ಪೋಟೋ ಜಪ್ತು ಪಂಚನಾಮೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿದಾರರ ಸಹಿಯನ್ನು ನಿಪಿ-12(ಡಿ) ಎಂದು ಗುರುತಿಸಲಾಯಿತು . ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ತನ್ನ ಇರುವ ಬಗ್ಗೆ ಗುರುತಿಸಿದ್ದು ಸದರಿ ಎರಡು ಪೋಟೋಗಳನ್ನು ನಿಪಿ-50 ಎಂದು ಗುರುತಿಸಲಾಯಿತು . ನಿಪಿ-50 ಪೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಗೊತ್ತಿಲ್ಲ .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).

-2-

<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>

ದಿಃ 12-7-2021 ರಂದು ಬೆಳಿಗ್ಗೆ 11-00 ರಿಂದ 12-00 ಅವಧಿಯಲ್ಲಿ ಹೊಳಗುಂದ ಗ್ರಾಮ ಪಂಚಾಯಿತಿ ಕಚೇರಿಗೆ ಪಂಚನಾಮೆ ಸಲುವಾಗಿ ನಮ್ಮನ್ನು ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಚಾಸಾ 20 ಮತ್ತು ಚಾಸಾ 1 ರವರು ಹಾಜರಿದ್ದು ನಾವು ಚಾಸಾ 20 ರವರನ್ನು ವಿಚಾರಿಸಿದ್ದೆವು ಎಂದರೆ ಸರಿಯಲ್ಲ . ಚಾಸಾ 20 ರವರು ಕೆನಾಲ್ ನಲ್ಲಿ ಇಬ್ಬರು ಹೆಣ್ಣು ಮಕ್ಕಳ ಶವಗಳು ತೇಲಿ ಹೋಗಿದ್ದನ್ನು ತನ್ನ ಮೊಬೈಲ್ ನಿಂದ ಪೋಟೋ ತೆಗೆದ ಬಗ್ಗೆ ಹೇಳಿ ಮೊಬೈಲ್ ಹಾಜರು ಪಡಿಸಿದ್ದ ಎಂದರೆ ಸರಿಯಲ್ಲ . ಆತನ ಮೊಬೈಲ್ ಪೋನ್ ನಲ್ಲಿದ್ದ ಪೋಟೋಗಳನ್ನು ನೋಡಿ ಚಾಸಾ 1 ರವರು ತನ್ನ ತಾಯಿ ಜಯಮ್ಮ ಮತ್ತು ತಂಗಿ ರಾಮಲಕ್ಷ್ಮಿ ಎಂದು ಗುರುತಿಸಿದ್ದಳು ಎಂದರೆ ಸರಿಯಲ್ಲ . ನಂತರ ಚಾಸಾ 36 ರವರ ಪೊಟೋ ಸ್ಟುಡಿಯೋದವರನ್ನು ಸ್ಥಳಕ್ಕೆ ಕರೆಸಿ ಡಿವಿಡಿಯಲ್ಲಿ ಹಾಕಿ ಸದರಿ ಪೋಟೋಗಳನ್ನು ಜಪ್ತು ಮಾಡಿಕೊಂಡು ಪೋನ್ ನ್ನು ಚಾಸಾ 20 ರವರಿಗೆ ವಾಪಾಸ್ಸು ಕೊಟ್ಟಿದ್ದರು ಎಂದರೆ ಸರಿಯಲ್ಲ . ಸಾಕ್ಷಿಗೆ ಪೋಟೋಗಳಿಂದ ಡಿವಿಡಿಯನ್ನು ಪ್ಲೇ ಮಾಡಿ ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ . ಸದರಿ ಡಿವಿಡಿಯನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿರುತ್ತದೆ .

ನನಗೆ ಈಗ ಓದಿ ಹೇಳಿದ ನಿಪಿ-12 ರಂತೆ ಪಂಚನಾಮೆ ಮಾಡಿದ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .</u>

(ಸಾಕ್ಷಿಯ ಹೇಳಿಕೆಯನ್ನು  ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು  ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.